Sri D. B. KALMANKAR.—If it is a fact that he has regretted the incident, why is it stated in answer to question (*b*) that "As the Press people who were expected at 8 P. M. on 17th September, 1970, arrived at 3 A.M. an odl hour on 18th September 1970, arrangements made for the Press people could not be availed by them". May I take this answer as incorrect ?

Sri M. RAJASEKHARA MURTHY.—Both are correct.

Sri D. B KALMANKAR.—Is it not a fact that our Deputy Minister was playing cards even after the information reached him that he did not make arrangements for a group of journalists ?

Sri M. RAJASEKHARA MURTHY.—The allegations are not only baseless but mischievous.

Sri N. M. KOTRABASAIAH SOGI.—I want to make a personal explanation.

Sri H. SIDDAVEERAPPA.—How can a personal explanation be made during the question hour ?

Mr. SPEAKER.—After the question hour is over let him explain.

Sri M. S. KRISHNAN.—How can there be a personal explanation when the matter, as the Hon. Minister said, is baseless and mischievous ? Can we take it that the Hon. Deputy Minister is contradicting the statement ?

Mr. SPEAKER.—Hon. member can draw his own inference.

Derecognition of Princely Order

8. Sri L. SRIKANTAIAH (Nanjangud).—

Will the Chief Minister be pleased to state :—

(*a*) whether the Government is in receipt of the order of derecognition of the Princely order ;

(*b*) if so, the steps taken by the Government to give effect to the order :

(*c*) the properties that had been recognised as personal or private property of Princes and as State or Government properties in the State of Mysore under the agreement with the Princely Order (details of the nature and kind of property may be given) ;

(*d*) whether the palaces situated in Mysore, Bangalore and Ooty are State properties (the number of Palaces with their names may be given) ;

(*e*) whether the Government intends to make use of these Palaces ?

Sri VEERENDRA PATIL (Chief Minister).—

(*a*) Yes.

(*b*) Concerned officers have been directed to withdraw the privileges enjoyed by the Ex-Rulers.

(*c*) to (*e*) It will not be possible to furnish any details.

The whole matter is under consideration of Government.

ಶ್ರೀ ಎಲ್. ಶ್ರೀ ಕಂಠಯ್ಯ.—(ಸಿ) ಇಂದ (ಉ) ಪ್ರಶ್ನೆವರೆಗೆ ಉತ್ತರವಾಗಿ ಯಾವ ವಿವರ ಗಳನ್ನೂ ನೀಡಲು ಸಾಧ್ಯವಿಲ್ಲ ಎಂದು ಹೇಳಲಾಗಿದೆ. ಪ್ರಿನ್ಸಿ ಆರ್ಡರ್ ಡೀರೆಕಗ್‌ನಿಷನ್ ಬಗ್ಗೆ ಆಗಿರುವ ಆರ್ಡರ ಕಾಪಿ ಸರ್ಕಾರಕ್ಕೆ ಒಂದಿದೆಯೆಂದು ನಾನು ಭಾವಿಸಿದ್ದೇನೆ. ರಾಜರುಗಳ ಮಾನ್ಯತೆಯನ್ನು ರದ್ದುಪಡಿಸಿದ ಮೇಲೆ ಅವರ ಆಸ್ತಿಯ ಮೇಲೆ ಟ್ಯಾಕ್ಸ್, ಕಂದಾಯ ಮುಂತಾದ್ದನ್ನು ಹಾಕಬೇಕಾಗುವುದು, ಖಾಸಗಿ ಸ್ವತ್ತಿನ ಮೇಲೆ ಸರಕಾರ ಮತ್ತು ಮುನಿಸಿ ಪಾಲಟಿ ಕಂದಾಯ, ತೆರಿಗೆ ಮಗ್ಗೈರೆ ಹಾಕಲು ಅವಕಾಶವಿದೆ. ನಮಗೆ ಬಂದಿರುವ ವರ್ತಮಾನದ ಪ್ರಕಾರ ಆರಮನೆ ಆಸ್ತಿ ಕೆಲವು ಮಾರಾಟವಾಗುತ್ತಿವೆ. ಮಾರಾಟವಾದಮೇಲೆ ಸರಕಾರ ಕೋರ್ಟ್ ಹತ್ತಿ ವ್ಯಾಜ್ಯಕ್ಕೆ ನಿಲ್ಲಬೇಕು. ಹಾಗಿರುವಾಗ ಈ ರಾಜರ ಆಸ್ತಿಗಳ ತಪಶೀಲನ್ನು ತಿಳಿಯದಿದ್ದರೆ ಹೇಗೆ ?

†ಶ್ರಿ ವೀರೇಂದ್ರ ಪಾಟೀಲ್.—ಡೀರೆಕಗ್‌ನಿಷನ್ ಆದ ತಕ್ಷಣ ಈ ಪ್ರಶ್ನೆಯನ್ನು ಕೂಲಂಕಷವಾಗಿ ಪರಿಶೀಲಿಸಬೇಕೆಂದು ಅಡ್ವೊಕೇಟ್ ಜನರಲ್ ರವರಿಗೆ ಮತ್ತು ಲಾ ಇಲಾಖೆಗೆ ತಿಳಿಸಿದ್ದೇವೆ. ಅವರ ಪರಿಶೀಲನೆಯಾದ ನಂತರ ಮುಂದಿನ ಕ್ರಮ ಕೈಕೊಳ್ಳಬೇಕಾಗುವುದು. ಎಲ್ಲಾ ಪ್ರಶ್ನೆಗಳೂ ಪರಿಶೀಲನೆಯಲ್ಲಿವೆ. ಆದುದರಿಂದ ಯಾವುದನ್ನೂ ಕೂಡ ಈಗ ಹೇಳುವುದು ಏಕತವಲ್ಲ. ಯಾವುದೇ ಕಾರಣದಿಂದ ನಿಧಾನಮಾಡುತ್ತಿಲ್ಲ. ರಾಜ್ಯದ ಹಿತದೃಷ್ಟಿಯಿಂದ ಸೂಕ್ತ ಕ್ರಮ ತೆಗೆದುಕೊಳ್ಳಲಾಗಿದೆ. ಕಾನೂಂಕಷವಾಗಿ ಖಾಸಗಿ ಆಸ್ತಿ ಯಾವುದು ಎಂದು ಪರಿಶೀಲಿಸಿ ತಿಳಿಯುವುದಕ್ಕೆ ಮುಂಚೆ ಉತ್ತರ ಕೊಡುವುದು ಕಷ್ಟವಾಗುವುದು.

Sri M. S KRISHNAN.—In answer to (*b*) it is stated the concerned Officers have been directed to withdraw the privileges enjoyed by the Ex-Rulers. May I know what are the privileges that were enjoyed by these Ex-rulers and who are the princes that have been affected by this order ?

Sri VEERENDRA PATIL.—There are 9 Ex-rulers. They are:

Maharaja of Mysore
Rajah of Sandur
Rajah of Kurundwad
Junior Rajah of Kurundwad
Senior Rajah of Kurundwad
Nawab of Savanoor
Rajah of Mudhol
Rajah of Jamkandi
Rajah of Ramdurga.

Their privileges were, they had their : personal flag ; they used to have red number plate on their car; they had free licence for hunting; they were exempted from Arms Act; they were exempted from local taxes; there was no ceiling for their holdings; they were entitled for medical attendance at Government Hospitals; they were exempted from being sued in the Court of law by anybody and such other things. In addition to this they had their privy purse.

ಶ್ರೀ ಟಿ ಆರ್. ಶಾಮಣ್ಣ.— ರಾಜ್ಯದ ಹಿತದೃಷ್ಟಿಯಿಂದ, ಜನರ ಹಿತದೃಷ್ಟಿಯಿಂದ ನ್ಯಾಯಪಾಗಿ ಸಾರ್ವಜನಿಕರಿಗೆ ಸೇರಬೇಕಾದ ಆಸ್ತಿಪಾಸ್ತಿಯನ್ನು ಸರಕಾರ ವಶಕ್ಕೆ ತೆಗೆದು ಕೊಳ್ಳುವುದಾಗಿ ಮುಖ್ಯ ಮಂತ್ರಿಗಳು ಪೂರ್ಣ ಭರವಸೆ ಕೊಡುವರೆ ?

ಶ್ರೀ ವೀರೇಂದ್ರ ಪಾಟೀಲ್.— ಮೊದಲು ಯಾವುದು ಖಾಸಗಿ ಆಸ್ತಿ ಎಂಬುದು ನಿಗದಿಯಾಗ ಬೇಕು. ಅದನ್ನು ಪರಿಶೀಲಿಸಿ ಒಂದು ನಿರ್ಣಯಕ್ಕೆ ಬಂದಮೇಲೆ ಮಾನ್ಯ ಸದಸ್ಯರು ಹೇಳಿದಂತೆ ಸರಕಾರಕ್ಕೆ ಸೇರಿಸಿಕೊಳ್ಳಲು ಪ್ರಯತ್ನಮಾಡುತ್ತೇವೆ.

Sri A. R. BADRINARAYAN.— Before finalisation in consultation with the Advocate General and the Law Department, supposing something has happened to the properties of these Rajahs, how are you going to prevent it ?

Sri VEERENDRA PATIL.— If it is determined if they are private properties, the Government cannot prevent them from alienating them. If they are not at all private properties and they are the Government properties, alienations made do not stand.

10-30 P.M.

Sri A. R. BADRINARAYAN.— Sir, the question as to whether it is a private property or Government property is not yet decided and in the meantime if any person assumed that it is a private property and begins to sell the property, will it not be a loss to the Government ?

Sri VEERENDRA PATIL.— Those who purchase or sell this property will be doing it at their own risk.

ಶ್ರೀ ಬಿ. ಗಂಗಣ್ಣ.— ವಿಲೇಜ್ ಆಫೀಸರ್ಸ್‌ಗೆ ಯಾವ ರೀತಿಯ ಒಂದು ಸೌಲತ್ತನ್ನು ಕೊಟ್ಟಿದ್ದೀರೋ ಅದೇ ರೀತಿ ಎಕ್ಸ್-ರೂಲರ್ಸ್‌ಗೂ ಅವರಲ್ಲಿ ಅರ್ಹತೆ ಉಳ್ಳವರ ಬಗ್ಗೆ ಪುನರ್ ಪರಿಶೀಲನೆ ಮಾಡಿ ಕೆಲವರನ್ನು ಕೆಲವು ಸಂಸ್ಥಾನದ ಗವರ್ನರ್‌ಗಳಾಗಿ ಮಾಡಬೇಕೆಂದು ಗವರ್ನಮೆಂಟ್ ಆಫ್ ಇಂಡಿಯಾದವರಿಗೆ ರೆಕಮಂಡೇಷನ್ ಮಾಡತಕ್ಕ ಉದ್ದೇಶವೇನಾದರೂ ಇದೆಯೇ ?

ಶ್ರೀ ವೀರೇಂದ್ರ ಪಾಟೀಲ್.—ಆ ರೀತಿ ಗವರ್ನರ್‌ಗಳು ಮತ್ತು ಅಂಬಾಸಿಡರ್‌ಗಳನ್ನು ನೇಮಕ ಮಾಡುವುದು ಕೇಂದ್ರ ಸರ್ಕಾರದ ಜವಾಬ್ದಾರಿ. ಅದು ಅವರ ಕೆಲಸ, ಅವರಿಗೆ ಹೀಗೆ ಮಾಡಿ ಹಾಗೆ ಮಾಡಿ ಎಂದು ಹೇಳುವಷ್ಟುಮಟ್ಟಿಗೆ ನಾವು ಹೋಗುವುದಿಲ್ಲ.

ಶ್ರೀ ಎನ್. ಎ. ಚನ್ನೇಗೌಡ.— ಮೈಸೂರಿನಲ್ಲಿ ನಡೆಯುತ್ತಾ ಇದ್ದಂಥ ವಿಶ್ವ ಆಕರ್ಷಣೀಯ ವಾದಂತಹ ದಸರಾ ಮಹೋತ್ಸವವನ್ನು ನಿಲ್ಲಿಸಿದ್ದರಿಂದ ಮೈಸೂರು ನಗರದ ಆರ್ಥಿಕ ಪರಿಸ್ಥಿತಿಯ ಮೇಲೂ ಕೂಡ ಬಹಳ ಪರಿಣಾಮವನ್ನುಂಟು ಮಾಡಿದೆ, ಅದಕ್ಕೆ ಅಲ್ಟರ್‌ನೇಟೀವ್ ಆಗಿ ಏನು ಮಾಡಬೇಕೆಂದು ಇದ್ದೀರಿ ?

ಶ್ರೀ ವೀರೇಂದ್ರಪಾಟೀಲ್.—ಮಾನ್ಯ ಸದಸ್ಯರು ಹೇಳಿದ್ದನ್ನು ಪೂರ್ತಿಯಾಗಿ ಒಪ್ಪುತ್ತೇನೆ. ಪ್ರತಿವರ್ಷ ಎಷ್ಟು ವೈಭವದಿಂದ ದಸರಾ ಆಚರಿಸುತ್ತಾ ಇತ್ತೋ ಅಷ್ಟು ವೈಭವದಿಂದ ಈ ವರ್ಷ ಆಚರಿಸುವುದಕ್ಕೆ ಸಾಧ್ಯವಾಗಿಲ್ಲ. ಅದು ಮಾನ್ಯ ಸದಸ್ಯರಿಗೂ ಗೊತ್ತು. ದಸರಾವನ್ನು ಬಹಳ ವೈಭವದಿಂದ ಮಾಡಬೇಕು, ಟೂರಿಸ್ಟ್ ಅಟ್ರಾಕ್ಷನ್ ಮಾಡಬೇಕು, ಮುಂದಿನ ವರ್ಷ ಇದಕ್ಕಿಂತಲೂ ಒಂದು ತೂಕ ಹೆಚ್ಚಿನ ರೀತಿಯಲ್ಲಿ ಆಚರಿಸಬೇಕೆನ್ನುವುದು ಸರ್ಕಾರದ ನೀತಿಯಾಗಿರುವುದರಿಂದ ಇವತ್ತೇ ಹೀಗೆ ಮಾಡುತ್ತೇವೆ ಎಂದು ಹೇಳುವುದಕ್ಕಾಗುವುದಿಲ್ಲ, ನಮ್ಮ ಕೆಲವು ಅಧಿಕಾರಿಗಳ-ತಜ್ಞರ ಒಂದು ಸಮಿತಿ ಮಾಡಿ ಅವರು ಅಡ್ವಾನ್ಸ್ ಆಗಿ ಮುಂದಿನ ದಸರಾ ಬಹಳ ವೈಭವದಿಂದ, ವಿಜೃಂಭಣೆಯಿಂದ ಮಾಡುವುದಕ್ಕೆ ಏನು ಮಾಡಬೇಕೆಂಬುದನ್ನು ಪರಿಶೀಲನೆ ಮಾಡುತ್ತಾರೆ. ಬಹುತಃ ಮುಂದಿನ ವರ್ಷ ಬಹಳ ವೈಭವದಿಂದ ಮಾಡುವುದಕ್ಕೆ ಸಾಧ್ಯವಾಗುತ್ತದೆ.

ಶ್ರೀ ಎಂ. ಎಸ್. ಕೃಷ್ಣನ್.— ಜಂಬೂ ಸವಾರಿ ಮಾಡಿದರೆ ಆ ಸ್ಥಾನದಲ್ಲಿ ಯಾರು ಕುಳಿತು ಕೊಳ್ಳುತ್ತಾರೆ ?

ಶ್ರೀ ವೀರೇಂದ್ರ ಪಾಟೀಲ್.— ಜಂಬೂ ಸವಾರಿ ಮೇಲೆ ಯಾರು ಕೂಡಬೇಕು, ದರ್ಬಾರಿನಲ್ಲಿ ಯಾರು ಕೂಡಬೇಕು ಎಂಬುದನ್ನೆಲ್ಲಾ ಇವತ್ತೇ ಹೇಳುವುದಕಾಗುವುದಿಲ್ಲ. ಲಕ್ಷಾವಧಿ ಜನ ಹೊರಗಡೆಯಿಂದ ಬರುತ್ತಾರೆ ಅವರಿಗೆ ಹೆಚ್ಚು ಅಟ್ರಾಕ್ಷನ್ ಮಾಡುವುದಕ್ಕೆ ಏನು ಮಾಡ ಬೇಕೆಂಬುದನ್ನು ಆಲೋಚನೆ ಮಾಡುವುದಕ್ಕೆ ಒಂದು ತಜ್ಞರ ಕಮಿಟಿ ಮಾಡುತ್ತೇವೆ ಎಂದು ಆಗಲೇ ಹೇಳಿದೆ.

ಶ್ರೀ ಎಚ್. ಬಿ. ಜ್ಯಾರನಯ್ಯ.— ಹಿಂದೆ ಮಹಾರಾಜರನ್ನು ರಾಜ್ಯದ ಆಡಳಿತದ ಸಂಕೇತ ಅಂತ ಹೇಳಿ ಅವರನ್ನು ಮೆರವಣಿಗೆ ಮಾಡಲು ಅವಕಾಶ ಇತ್ತು. ಮುಂದೆ ದಸರಾ ಕಾಲದಲ್ಲಿ ಎಲ್ಲಾ ಮಂತ್ರಿಗಳನ್ನೂ ಕೂಡ ಒಂದೊಂದು ಆನೆ ಮೇಲೆ ಕೂಡಿಸಿ, ಸ್ಪೀಕರ್‌ರವರನ್ನೂ ಒಂದು ಆನೆಯಮೇಲೆ ಕೂಡಿಸಿ ಅವರು ರಾಜ್ಯದ ಆಡಳಿತದ ಒಂದು ಸಂಕೇತ ಅಂತ ಹೇಳಿ ಮೆರವಣಿಗೆ ಮಾಡಿಸುತ್ತೀರಾ ?

(ಉತ್ತರ ಇಲ್ಲ)

ಶ್ರೀ ಎನ್. ಹುಚ್ಚಮಾಸ್ತಿಗೌಡ.— ದೇಶಕ್ಕೆ ಸ್ವಾತಂತ್ರ್ಯ ಬಂದ ಮೇಲೆ ರಾಜ ಮಹಾರಾಜರ ಸ್ಥಾನಮಾನ ಜನನಾಯಿತ ಪ್ರತಿನಿಧಿಗಳಿಗೆ ಬಂದಿದೆ. ನಮ್ಮೆಲ್ಲರ ಪ್ರತೀಕವಾಗಿ ನಮ್ಮ ರಾಜ್ಯದ ಮುಖ್ಯಮಂತ್ರಿಗಳು ಇದ್ದಾರೆ. ಆದ್ದರಿಂದ ಆ ಹತ್ತು ದಿವಸ ನಡೆಯತಕ್ಕ ದರ್ಬಾರಿನಲ್ಲಿ ಮತ್ತು ಜಂಬೂ ಸವಾರಿ ಕಾಲದಲ್ಲಿ ಮುಖ್ಯಮಂತ್ರಿಗಳೇ ಆ ಸ್ಥಾನವನ್ನು ಅಲಂಕರಿಸಬೇಕೆಂಬ ಸಲಹೆಯನ್ನು ಆ ಕಮಿಟಿಯ ಮುಂದೆ ಇಟ್ಟು ತೀರ್ಮಾನ ಮಾಡುವುದು ಸೂಕ್ತವಲ್ಲವೇ ?

ಅಧ್ಯಕ್ಷರು — ಎಲ್ಲಾ ರೆಜಿಸ್ಲೇಟರ್ಸ್‌ನ್ನೂ ಏಕೆ ಜಂಬೂಸವಾರಿ ಮಾಡಿಸಬಾರದು ?

ಶ್ರೀ ಬಿ. ಭಾನ್ಮರಶೆಟ್ಟಿ.— ಇಲ್ಲಿ ಉಚ್ಚ ಸ್ಥಾನ ಅಲಂಕರಿಸಿರುವವರು ತಾವು ನಿಜವಾಗಿಯೂ ತಮ್ಮನ್ನು ಮೆರವಣಿಗೆ ಮಾಡಿಸಬೇಕು.

ಅಧ್ಯಕ್ಷರು.— ಇಲ್ಲ ಯಾರ್‍ಯಾರು ಮೆರವಣಿಗೆ ಮಾಡಿಸಿಕೊಳ್ಳಬೇಕೆಂದು ಆಶೆ ಪಟ್ಟಿದಕ್ಕಿರೋ ಅವರ ಮೆರವಣಿಗೆ ಮಾಡಿದರೆ ನನ್ನದೂ ಮಾಡಿದ ಹಾಗೇ ಆಯಿತು.

ಶ್ರೀ ಅಜೀಜ್ ಸೇಟ್.— ಹಿಂದೆ ಜಂಬೂ ಸವಾರಿ ಹೊರಟ ಕಾಲದಲ್ಲಿ ಹಿಂದೆ ಆನೆ ಗಾಡಿಯಲ್ಲಿ ಎ.ಡಿ.ಸಿ.ಗಳು, ರಾಯಲ್‌ಫ್ಯಾಮಿಲಿಯವರು ಕುಳಿತುಕೊಂಡು ಹೋಗುತ್ತಾ ಇದ್ದರು, ಅದೇ ರೀತಿ ರೆಜಿಸ್ಲೇಟರ್ಸ್‌ನ್ನು ಕೂಡಿಸಿ, ತಾವು ಆನೆಮೇಲೆ ಕುಳಿತುಕೊಳ್ಳಿ, ಮುಖ್ಯಮಂತ್ರಿಗಳು ಕುದುರೆ ಮೇಲೆ ಕುಳಿತುಕೊಳ್ಳಲಿ, ಮತ್ತು ಮಂತ್ರಿಗಳು ಹೇಸರ ಕತ್ತೆ ಮೇಲೆ ಕುಳಿತುಕೊಂಡು ಮೆರವಣಿಗೆ ಹೊರಟರೆ ಚೆನ್ನಾಗಿರುತ್ತದೆ.

ಅಧ್ಯಕ್ಷರು.— ಒಂದೇ ಜಂಬೂ ಏಕೆ ಎಷ್ಟು ಮೆಂಬರುಗಳು ಇದ್ದಾರೋ ಅಷ್ಟು ಜಂಬು ಮೆರವಣಿಗೆ ಹೋಗಬಹುದು.

(ನಗು)

ಶ್ರೀ ಎಸ್. ಎಂ. ಗುರೆಡ್ಡಿ.— ನಮ್ಮ ಮಹಾರಾಜರಿಗೆ ಇರುವಂತಹ ಜಮೀನು ಆಗಲಿ, ಆಸ್ತಿಗಾಗಲಿ ಅದಕ್ಕೆ ಸೀಲಿಂಗ್‌ಲಿಮಿಟ್ ಹಾಕಿದ್ದೀರಾ ? ಹಾಕಿದ್ದರೆ ಬೆಂಗಳೂರಿನಲ್ಲಿ ಅವರಿಗೆ ಸಾವಿರಾರು ಎಕರೆ ಇದೆ, ಅದಕ್ಕೂ ಕೂಡ ಅನ್ವಯಿಸುತ್ತದೆಯೇ ?

ಶ್ರೀ ವೀರೇಂದ್ರ ಪಾಟೀಲ್.— ಜನಸಾಮಾನ್ಯರಿಗೆ ಏನೇನು ಕಾನೂನು ಅನ್ವಯಿಸುತ್ತದೆಯೋ ಅದೆಲ್ಲಾ ಅವರಿಗೂ ಅನ್ವಯಿಸುತ್ತದೆ. ಸೀಲಿಂಗ್ ಮೇಲೆ ಇದ್ದರೆ ಅವರೂ ಡಿಕ್ಲರೇಷನ್ ಕೊಡಬೇಕಾಗುತ್ತದೆ. ಸೀಲಿಂಗ್ ಮೇಲೆ ಇರತಕ್ಕ ಭೂಮಿಯನ್ನು ಅವರಿಂದ ತಗೆದುಕೊಳ್ಳುತ್ತೇವೆ. ಅದೇ ರೀತಿ ಬೆಂಗಳೂರಿನಲ್ಲಾಗಲಿ, ಮೈಸೂರಿನಲ್ಲಾಗಲಿ ಎಲ್ಲೇ ಇರಲಿ ಜನಸಾಮಾನ್ಯರಿಗೆ ಇವತ್ತು ಯಾವುದು ಕಾನೂನು ಅನ್ವಯಿಸುತ್ತದೆ ಅದೆಲ್ಲಾ ಅವರಿಗೂ ಅನ್ವಯಿಸುತ್ತದೆ.

ಶ್ರೀ ಎಲ್. ಶ್ರೀಕಂಠಯ್ಯ.—ಬೆಂಗಳೂರು ಅರಮನೆ, ಮೈಸೂರು ಅರಮನೆಯನ್ನು ಸಾರ್ವಜನಿಕ ಬೊಕ್ಕಸದಿಂದ ಕಟ್ಟಿಸಲಾಗಿದೆ ಎಂಬ ಅಂಶ ತಮ್ಮ ಗಮನಕ್ಕೆ ಬಂದಿದೆಯೇ ?

ಶ್ರೀ ವೀರೇಂದ್ರ ಪಾಟೀಲ್.—ತಾವು ಹೇಳಿದ ವಿಚಾರ ಪರಿಶೀಲನೆಯಲ್ಲಿರುವುದರಿಂದ ಇವತ್ತು ಏನೂ ಹೇಳುವುದಕ್ಕೆ ಸಾಧ್ಯವಿಲ್ಲ.

ಶ್ರೀ ಎಸ್. ಶಿವಪ್ಪ.—ಹಿಂದೆ ಪ್ರಜಾಪ್ರತಿನಿಧಿ ಸಭೆ ಅಂತ ದಸರಾ ಕಾಲದಲ್ಲಿ ಜಗನ್ ಮೋಹನ ಅರಮನೆಯಲ್ಲಿ ಹತ್ತು ದಿವಸ ಸೆಷನ್ ನಡೆಯುತ್ತಾ ಇತ್ತು, ಅದೇ ರೀತಿ ಈಗಲೂ ಕೂಡ ಅಲ್ಲಿ ಅನೇಕ ದೊಡ್ಡ ದೊಡ್ಡ ಕಟ್ಟಡಗಳು ಇವೆ, ಅರಮನೆ ಕೂಡ ಇದೆ, ಇವತ್ತು ಮಹಾರಾಜರು ದರ್ಬಾರು ಮಾಡುತ್ತಾ ಇದ್ದ ಸ್ಥಳದಲ್ಲಿ ಶಾಸನ ಸಭೆಯನ್ನು ನಡೆಸಬಹುದೇ ಎಂಬುದನ್ನೂ ಕೂಡ ಯೋಚನೆ ಮಾಡಬೇಕು.

ಶ್ರೀ ವೀರೇಂದ್ರ ಪಾಟೀಲ್.—ಮಾನ್ಯ ಸದಸ್ಯರು ಅನೇಕ ಸೂಚನೆಗಳನ್ನು ಹೇಳಿದ್ದಾರೆ. ಮತ್ತು ಇನ್ನೂ ಅನೇಕ ಸೂಚನೆಗಳು ಇರಬಹುದು. ನಾನು ಈ ಸಂದರ್ಭದಲ್ಲಿ ಬಹಳ ಕಳಕಳಿಯಿಂದ ವಿನಂತಿಸಿಕೊಳ್ಳುವುದೇನೆಂದರೆ ಲಿಖಿತಮೂಲಕವಾಗಿ ಸಲಹೆ ಮಾಡಿದರೆ ಒಂದು ನಿರ್ಣಯ ತೆಗೆದುಕೊಳ್ಳುವುದಕ್ಕೆ ಅವಕಾಶವಾಗುತ್ತದೆ. ದುರ್ದೈವ ಇವತ್ತಿನ ಪರಿಸ್ಥಿತಿ ಏನೆಂದರೆ ಇದಕ್ಕೆ ರಾಜಕೀಯ ಬಣ್ಣ ಕಟ್ಟುವಂತಹ ಜನ ಇದ್ದಾರೆ, ಮಾನ್ಯ ಚನ್ನೇಗೌಡರು ಹೇಳಿದ ಹಾಗೆ ಮೈಸೂರು ನಗರದಲ್ಲಿರುವಂತಹ ವ್ಯಾಪಾರಸ್ಥರು ಮತ್ತು ಇನ್ನೂ ಅನೇಕ ಜನರು ಈ ಒಂದು ದಸರಾ ನಂಬಿಕೊಂಡೇ ಸುಮಾರು 3-4 ತಿಂಗಳು ಜೀವನ ಮಾಡುತ್ತಿದ್ದರು, ಅವರಿಗೆ ಒಂದು ಆಘಾತವಾಗಿದೆ ಅದಕ್ಕಾಗಿಯೇ ಮುಂದಿನ ವರ್ಷ ದಸರಾ ಉತ್ಸವವನ್ನು ವೈಭವದಿಂದ ಆಚರಿಸುವುದಕ್ಕೆ ಯಾವ ತರಹ ಅಡ್ಡಿ ಆತಂಕ ಬರದಂತೆ ಮಾಡಬೇಕು, ಹೆಚ್ಚಿನ ಜನರ ಗಮನ ಸೆಳೆಯಬೇಕು, ಹೆಚ್ಚು ಜನರು ಬರುವಂತೆ ಮಾಡಬೇಕೆನ್ನುವುದು ನಮ್ಮ ಮನಸ್ಸಿನಲ್ಲಿದೆ. ಮಾನ್ಯ ಸದಸ್ಯರು ಏನು ಸಲಹೆಗಳನ್ನು ಕೊಡುತ್ತಾರೋ ಅದನ್ನು ಕಮಿಟಿಯ ಮುಂದೆ ಕಳುಹಿಸುತ್ತೇನೆ, ಅವರ ಸಲಹೆಯ ಮೇರೆ ನೂಕ್ತವಾಗಿ ಪರಿಶೀಲನೆ ಮಾಡಿ ಮುಂದಿನ ಕ್ರಮ ತೆಗೆದುಕೊಳ್ಳುತ್ತೇವೆ.

Held over Short Notice Question No. 3 *re*: Nomination to the Senates of the Karnatak and the Bangalore University.

ಶ್ರೀ ಕೆ. ಪಿ. ನಾಡಗೌಡ.—ಕರ್ನಾಟಕ ಯೂನಿವರ್ಸಿಟಿ ಸೆನೆಟ್‌ಗೆ ಪುಟ್ಟಪ್ಪನವರನ್ನು ನಾಮಕರಣ ಮಾಡುವಾಗ ಸರ್ಕಾರದವರು ರೆಕಮಂಡೇಷನ್ ಮಾಡಿದ್ದರೇ ಇಲ್ಲವೇ ಎಂಬುದು ಮಹತ್ವದ ವಿಷಯ. May I know whether the Government has recommended to the Chancellor about his nomination ?

ಶ್ರೀ ಕೆ. ವಿ. ಶಂಕರಗೌಡ.—ಆಕ್ಟ್ ಪ್ರಕಾರ ಚಾನ್ಸ್‌ಲರರವರು ಸರ್ಕಾರದವರನ್ನು ಕೇಳಬೇಕೆಂದು ಇಲ್ಲ. ಅವರಿಗೆ ಅಲ್ಲಿನ ಜನಗಳ ಪರಿಚಯ ಇಲ್ಲದೇ ಇರುವುದರಿಂದ ನಮ್ಮನ್ನು ಕೇಳುತ್ತಾ ಇದ್ದೇನೆ ಎಂದು ಹೇಳಿ ಕನ್‌ಸಲ್ಟ್ ಮಾಡಿದರು. ಈ ರೆಕಮಂಡೇಷನ್ ಮಾಡುವಾಗ ಅವರು ಸೆನೇಟ್‌ನಲ್ಲಿ ಸೂಚಿತರಾಗಿದ್ದರು ಅಂತ ಹೇಳಿ ಸರ್ಕಾರದವರ ಗಮನಕ್ಕೆ ಬಂದಿರಲಿಲ್ಲ, ಮೇಲಾಗಿ ಆಕ್ಟ್‌ನಲ್ಲಿ ಸೂಚಿತವಂನ್ನು ನಾಮಿನೇಟ್ ಮಾಡಬಾರದು ಅಂತ ಹೇಳಿ ಅಂತಹ ಅಡ್ಡಿ ಏನೂ ಇಲ್ಲ.

ಶ್ರೀ ಕೆ. ಪಿ. ನಾಡಗೌಡ.—ನೈತಿಕ ದೃಷ್ಟಿಯಿಂದ ಸೂಚಿತವರನ್ನು ನಾಮಿನೇಟ್ ಮಾಡುವುದು ಯೋಗ್ಯವಲ್ಲ ಎನ್ನುವುದು ಸರಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ಕೆ. ವಿ. ಶಂಕರಗೌಡ.—ಅದು ಯೋಗ್ಯವಲ್ಲ ಎಂದು ಛೆಹೆನೆಟ್ಟಾಗಿ ಹೇಳುವುದಕ್ಕಾಗುವುದಿಲ್ಲ. ಒಂದು ವೇಳೆ ಔಟ್‌ಸ್ಟಾಂಡಿಂಗ್ ಪರ್‌ಸನ್ಯಾಲಿಟಿ ಆಗಿದ್ದರೆ, ಸೂಚಿತರಾದರೂ ಅವರನ್ನು ನಾಮಕರಣ ಮಾಡಬಹುದು.

ಶ್ರೀ ಎಂ. ನಾಗಪ್ಪ.—ಸೆನೆಟ್ ಎಲೆಕ್ಷನ್‌ಗೆ ನಿಂತಿರುವ ವಿಷಯ ಗೊತ್ತಿಲ್ಲ ಎಂದು ಹೇಳಿದರು. ಈಗಲಾದರೂ ಅವರು ಸೆನೆಟ್ಟಿಗೆ ಮತ್ತು ಸಿಂಡಿಕೇಟಿಗೆ ನಿಂತು ಸೋತಿರುವುದು ಸರ್ಕಾರದ ಗಮನಕ್ಕೆ ಬಂದಿಲ್ಲವೇ ? ಹಾಗೆ ಗಮನಕ್ಕೆ ಬಂದರೆ, ಈ ವಿಷಯ ಪುನರಾಲೋಚನೆ ಮಾಡಿ ಬೇರೆ ಹೆಸರುಗಳನ್ನು ಕಳುಹಿಸುವುದಕ್ಕೆ ಪ್ರಯತ್ನ ಮಾಡುತ್ತೀರಾ ?

ಶ್ರೀ ಕೆ. ವಿ. ಶಂಕರಗೌಡ.—ಒಂದು ಸಾರಿ ನಾಮಕರಣ ಮಾಡಿದ ಮೇರೆ ಅದನ್ನು ಕಿತ್ತು ಹಾಕುವುದಕ್ಕೆ ಆಕ್ಟಿನಲ್ಲಿ ಅವಕಾಶ ಇಲ್ಲ. ಆದುದರಿಂದ ಈಗ ಆದದ್ದೂ ಆಗಿಹೋಗಿದೆ, ಮುಂದೆ ಅವರನ್ನು ಕಿತ್ತು ಹಾಕುವುದಕ್ಕೆ ಆಗುವುದಿಲ್ಲ.